ಮರುಳಾಗಿ ಹಾರುತ್ತಿದ್ದ. ಆದರೆ ಆತ ಹಾರಿ ಹೋದಾನೆಂಬ ಕಲ್ಪನೆಯೇ ನನಗಿರಲಿಲ್ಲ... ಮಾಧವನನ್ನು ನನ್ನ ಅನುಪಮ ಸೌಂದರ್ಯದಿಂದ ವಶ ಮಾಡಿಕೊಂಡಿದ್ದೇನೆಂಬ ಭ್ರಮೆಯ ಮೊಟ್ಟೆಯೊಳಗೆ ನಾನೇ ಅಕ್ಷರಶಃ ಬಂಧಿಯಾಗಿದ್ದೆ.

ಮಾಧವನೊಡನೆ ಲಿವ್ಇನ್‌ಗೆ ಹೋಗುವ ಮುನ್ನ ಅರುಣ್ ಮತ್ತು ಕೃಷ್ಣಕಾಂತ್ ಎಷ್ಟು ಸಭ್ಯತೆಯಿಂದ ನನ್ನನ್ನು ಮದುವೆಯಾಗುವ ಪ್ರಸ್ತಾಪ ಮಾಡಿದ್ದರು! ಮಾಧವನಂತಹ ಅಂದಗಾರ ನನ್ನವನು ಎಂಬ ಸತ್ವದ ನೆರಳಲ್ಲಿ ಅವರಿಬ್ಬರನ್ನೂ ಒಂದು ಲೆಕ್ಕಕ್ಕೂ ತೆಗೆದುಕೊಳ್ಳದೆ ತಿರಸ್ಕರಿಸಿಬಿಟ್ಟೆ.

ಅರುಣನ ಅಪ್ಪ ಒಂದು ಪ್ರತಿಷ್ಠಿತ ಪಕ್ಷದ ಲೀಡ್ ರಾಜಕಾರಣಿಯೂ ಆಗಿದ್ದವರು. ಈಗ ವಯಸ್ಸಾಗಿದ್ದರೂ ಅವರ ವರ್ಚಸ್ಸೇನೂ ಕಡಿಮೆಯಾಗಿಲ್ಲ. ಅಂತಹವರು ಆ ದಿನ ಮಗನ ಸಲುವಾಗಿ ಹೆಂಡತಿಯೊಡನೆ ನನ್ನನ್ನು ಭೇಟಿ ಮಾಡಲು ಬಂದಿದ್ದರೆ... ಮಮತೆಯಿಂದ ಮದುವೆಯ ವಿಷಯ ಪ್ರಸ್ತಾಪಿಸಿದ್ದರೆ... ಅದನ್ನು ನೆನೆದರೇ ಸಾಕು ಅಚ್ಚರಿಯಾಗುತ್ತದೆ ಈಗ.

ಅದೆಲ್ಲಾ ನಿಜವಾಗಿಯೂ ನಿಜವಾ?! ಭ್ರಮೆಯಾ?

ಅರುಣನ ಮದುವೆ ಆಯ್ತು. ಮಾಧವನನ್ನು ಮದುವೆಗೆ ಕರೆದಿದ್ದನೇ ಅರುಣ? ನನ್ನನ್ನು ಬಿಟ್ಟು?

ನನ್ನನ್ನೇಕೆ ಕರೆಯಬೇಕು? ನೀ ಬೇಡ ಎಂದು ತಿರಸ್ಕರಿಸಿ ಬಿಟ್ಟವಳನ್ನು..!

ಮಾಧವನೇ ಮದುವೆಯ ವಿಚಾರ ಹೇಳಿದ್ದು...

ಅಲ್ಲಿಗೆ ಅರುಣನ ಪಾತ್ರ ಪ್ರವೇಶ ನನ್ನ ಜೀವನದಲ್ಲಿ ಅಷ್ಟೇ... ಆದರೆ ಅರುಣ ನನಗಾಗಿ ನಾನು ಬೇಡ ಅಂದ ಮೇಲೂ ನಾಕಾರು ವರ್ಷ ಕಾದಿದ್ದ ವಿಚಾರ ಮೊನ್ನೆ ನನಗೆ ತಿಳಿಯಿತು. ಮಾಧವನಿಂದಲೇ....

'ಮ್, ನೀನು ನಿನ್ನ ಖಚಿತ ನಿಲುವು ತಿಳಿಸಿದ ಮೇಲೆಯೂ ನಾಕಾರು ವರ್ಷ ಅರುಣ ನಿನಗಾಗಿ ಕಾದಿದ್ದ' ಎಂದು ಮೊನ್ನೆಯ ನಮ್ಮಿಬ್ಬರ ಶರಂಪರ ಜಗಳದಲ್ಲಿ ಈತ ಬಾಯಿ ಬಿಟ್ಟಿದ್ದ. ನನಗೆ ರೋಸಿ ಹೋಗಿತ್ತು, 'ಹೌದೋ.. ಆತ ಕಾದಿದ್ದ ಅಂತ ಸಣ್ಣ ಸುಳಿವು ಸಿಕ್ಕಿದ್ದರೂ ನಾನು ಓಡಿಹೋಗುತ್ತಿದ್ದೆ... ನೀನೇಕೆ ನನ್ನನ್ನು ಬಿಡಲಿಲ್ಲ?' ಎಂದು ಕಿರುಚಿದ್ದಕ್ಕೆ, ಏನಂದ ಆತ?

'ಹೋಗು, ಈಗ ಹೋದರೂ ಅಡ್ಡಿಯಿಲ್ಲ, ನಿನ್ನನ್ನು ಇಟ್ಟುಕೊಳ್ತಾನೇನೋ ನೋಡು... ಆಗ ನೀ ಬೇಡ ಅಂತ ತಿರಸ್ಕರಿಸಿದ್ರೂ ನಾಯಿಯಂಗೆ ನಾಕಾರು ವರ್ಷ ಕಾಯ್ತಿದ್ದ. ಹೋಗ್ ಅವ್ನ ಮನೆ ಬಾಗ್ಲಿಗೆ ಈಗ...' ಎಂದು ಕೆಟ್ಟದಾಗಿ ನಕ್ಕಿದ್ದ.

'ಥೂ ನೀನು ಮನುಷ್ಯನಲ್ಲ ಕಣೋ ಮಾಧವ ಮೃಗ ಮೃಗ...' ನನಗೆ ಇದರ ಮೇಲೆ ಬೇರೆ ಮಾತು ಆಡಲು ಬರಲಿಲ್ಲ... ನಾನು ಆಡೆ ಎಂದರೂ ಮಾಧವ ಬಿಡಬೇಕಲ್ಲ... ಏನಾದರೂ ಕೊಂಕು ತೆಗೆದು ಆಡಿಸುತ್ತಾ, ಹಂಗಿಸುತ್ತಾ, ಅಳಿಸುತ್ತಾ... ಕೊನೆಗೆ ಅಂತ್ಯವಿರದ ಒಂದು ಶೂನ್ಯ ನೋವಿಗೆ ನೂಕಿ ಬಿಡುತ್ತಾನೆ.

ಅವನ ವರ್ತನೆಯೇ ವಿಚಿತ್ರವಾಗುತ್ತಿತ್ತು. ಕೃಷ್ಣಕಾಂತನ ವಿಚಾರದಲ್ಲೂ ಹೀಗೆಯೇ...

ನಿಮಗೆ ಕೃಷ್ಣಕಾಂತ್ ಡಲ್ಲಾಸ್‌ನಲ್ಲಿ ನೆಲೆಯಾದದ್ದು, ನಾನು ಮದುವೆ ನಿರಾಕರಿಸಿದ ಮೇಲೆ ಇಸ್ಕಾನ್‌ನ ಪರಮ ಅನುಯಾಯಿ ಆದದ್ದು ಹೇಳಿದರೆ ಖಂಡಿತಾ ಯಾವುದೋ ಕಾಲ್ಪನಿಕ ಕತೆ ಹೇಳುತ್ತಿರುವೆ ಎನ್ನುವಿರಿ.

ಸ್ವಲ್ಪ ಹೆಣ್ಣಿಗನ ಹಾವಭಾವವಿದ್ದ ಕೃಷ್ಣಕಾಂತ್, ಮೀಸೆ ಇಲ್ಲದ ಮುಖದ ಕಾರಣದಿಂದಲೇ ನನಗೆ ಸೇರುತ್ತಿರಲಿಲ್ಲ. ಆದರೆ ಈಗೀಗ ಆ ಮುಖದಲ್ಲಿ ಪ್ರೇಮವೇ ತುಂಬಿ ತುಳುಕುತ್ತಿದ್ದ ಎರಡು ಕಣ್ಣುಗಳು ಹೆಚ್ಚೇ ನೆನಪಾಗುತ್ತವೆ.

ನಾನೇಕೆ ಆ ಕಣ್ಣುಗಳ ಭಾಷೆಯನ್ನು ಆಗಲೇ ಅರ್ಥ ಮಾಡಿಕೊಳ್ಳಲಿಲ್ಲ? ಕೃಷ್ಣನ ಒಲವೆಲ್ಲಾ ಆ ಎರಡೂ ಕಣ್ಣಿನಲ್ಲೇ ಮಡುಗಟ್ಟಿತ್ತು, ತುಳುಕುತ್ತಿತ್ತು.

ಆ ದಿನ ನಾನು ನನ್ನ ಮಾಧವನ ಪರವಾದ ನಿಲುವನ್ನು ಖರೇ ಸ್ಪಷ್ಟಪಡಿಸಿದಾಗ, ಕೃಷ್ಣನ ಕಣ್ಣುಗಳಿಂದ ಒಲವು ಕೋಡಿ ಹರಿಯಿತು. ಆಗ ನನಗೆ ಸ್ವಲ್ಪ ಕೆಟ್ಟದೆನಿಸಿತು. ಇದೇ ಅಳುವನ್ನು ಆತ ಇನ್ನೂ ನಾಕಾರು ದಿನ ನನ್ನ ಮುಂದೆ ಸುರಿಸಿದರೆ, ನಾನು ಮಾಧವನನ್ನು ಎಲ್ಲಿ ಕಳೆದುಕೊಂಡು ಬಿಡುವೆನೋ ಎಂದು ಹೆದರಿದ್ದೆ.

'ಇಶ್ಶೀ... ಆತ ಹೆಣ್ಣಿಗನೇನು? ಅತ್ತನಲ್ಲಾ...' ನನ್ನ ಮನಸ್ಸೂ ಆ ಘಟನೆಯಿಂದ ಹಸಿಯಾಗಿತ್ತು. ಆದರೂ ತಾತ್ಸಾರದ ಭಾವ ಆರೋಪಿಸಿಕೊಂಡು ಮಾಧವನಿಗೆ ಹೇಳಿದ್ದೆ.

'ನಿನ್ನನ್ನು ಆತನ ರಾಧೆ ಎಂದುಕೊಂಡನೇನೋ...'

ನಗಾಡುತ್ತಾ ಮಾಧವ ನನ್ನನ್ನು ಅಪ್ಪಿಕೊಂಡ.

'ನಾನು ಯಾರ ರಾಧೆಯೂ ಅಲ್ಲ, ನಿನ್ನ ರಶ್ಮಿ' ಎಂದು ಮಾಧವ ಮುಂದೆ ಮಾತಾಡದಂತೆ ತುಂಬಾ ಹೊತ್ತು ಚುಂಬಿಸುತ್ತಲೇ ಇದ್ದೆ. ನಾನು ಮಾಧವನಿಗೆ ಒಲಿದ ರಾಧೆಯಾಗಿದ್ದೆ.

ಮಾಧವನಿಗೆ ಮಾತ್ರ ರಾಧೆಯಾಗಿದ್ದ ನಾನು ಈ ರೀತಿಯ ರೂಪಾಂತರಿ ರಶ್ಮಿಯಾಗಲು ಬಹಳ ಸಮಯ ಹಿಡಿಯಲಿಲ್ಲ. ಒಲವಿನ ಆವೇಗದಲ್ಲಿ ನಾನು ತುಂಬಾ ಭ್ರಮಾಧೀನಳಾಗುತ್ತಿದ್ದೆ. ಸ್ಮೃತಿ ತಪ್ಪುತ್ತಿದ್ದೆ. ಆ ವಿಸ್ಮೃತಿಯ ಭಾವದಿಂದ ಹೊರಬರಲು ನನಗೆ ಹೆಚ್ಚೇನೂ ಸಮಯ ಬೇಕಾಗಲಿಲ್ಲ.

ಮಾಧವ ಪ್ರಾಕ್ಟಿಕಲ್ ಇದ್ದ. ನಾರ್ಮಲ್ ಇದ್ದ. ಜೊತೆಗೆ ಜಾಣನೂ. ಅವನಿಗೆ ಮನೆಯಿತ್ತು. ನನ್ನೊಡನೆ ಇದ್ದದ್ದು ಅವನ ಮನೆಯಲ್ಲವೇ!?

ಅಲ್ಲವೇ? ಎಂದರೆ, ಅಲ್ಲ... ಅಲ್ಲ ಎಂದರೆ ನಾವಿದ್ದ ಮನೆ ಮನೆಯೇ ಅಲ್ಲ...

ಮಾಧವನಿಗೆ ಅಪ್ಪ ಅಮ್ಮ ತಮ್ಮ ತಂಗಿಯರಿದ್ದ ಮನೆಯಿತ್ತು. ಆತ ಯಾವತ್ತೂ ನನ್ನನ್ನು ಆ ಮನೆಗೆ ಕರೆದೊಯ್ಯಲಿಲ್ಲ.

ಏಕೆ?

ಇದು ಗೊತ್ತಾದ ದಿನವೇ ಅಲ್ಲವೇ ನಾನಾತನನ್ನು ಬಿಟ್ಟದ್ದು. ಎಂದರೆ, ಆತನ ಅಪ್ಪ–ಅಮ್ಮ, ತಂಗಿ–ತಮ್ಮರ ಬಗ್ಗೆ ನನಗೆ ಗೊತ್ತಾದ ದಿನ ಆತನನ್ನು ಬಿಟ್ಟಿದ್ದಲ್ಲ. ಯಾವ ಕಾರಣಕ್ಕೆ ಆತ ನನ್ನನ್ನು ಆ ಮನೆಗೆ ಕರೆದುಕೊಂಡು ಹೋಗಲು ನಿರಾಕರಿಸಿದ್ದಾನೆಂದು ತಿಳಿಯಿತೋ ಆ ಕಾರಣ ತಿಳಿದ ದಿನ...

ಅದೇನು ಅಂತಹ ಕಾರಣ!

ತಿಳಿಯುವ ಕುತೂಹಲ ನಿಮಗೆ ಮೂಡಿತೇ? ಅದನ್ನೀಗ ತಿಳಿಯಬೇಕಾದುದು ನಿಮ್ಮ ಹಕ್ಕೂ ಕೂಡ.

ಏಕೆಂದರೆ, ಸುಮ್ಮಗಿದ್ದವರಿಗೆ ನನ್ನ ಕತೆ ಹೇಳಲು ಪ್ರಾರಂಭಿಸಿದ್ದು ನಾನು ತಾನೇ!? ಹಾಗಾಗಿ ಕಾರಣವನ್ನೂ ನಾನೇ ಹೇಳುವೆ...

ಕೃಷ್ಣಕಾಂತ್!

ಹೌದೆಂದರೆ ನೀವು ನಂಬುವುದಿಲ್ಲ. ನಾನು ನಿರಾಕರಿಸಿದ ಕೃಷ್ಣಕಾಂತ್‌ನಿಂದಲೇ ನಾನೂ ಮಾಧವ ಬೇರಾಗಬೇಕಾಯ್ತು.

ಆ ದಿನ ನಾನು ಕೃಷ್ಣಕಾಂತ್‌ನನ್ನು ನಿರಾಕರಿಸಿದ ಮೇಲೂ ನನಗಾಗಿ ಸಾಕಷ್ಟು ಕಾಲ ಕಾಯುವುದಾಗಿ ಬಿಕ್ಕಳಿಸುತ್ತಲೇ ಪಿಸುಗುಟ್ಟಿದ್ದ ಎಂದಿದ್ದೆನಲ್ಲವೇ? ಛೇ ಛೇ ಇದನ್ನು ನಾನೆಂದೂ ಮಾಧವನಿಗೆ ಹೇಳಿರಲಿಲ್ಲ. ಏಕೆಂದರೆ, ನನ್ನನ್ನು ಕುರಿತು ಕವಿತೆ ಬರೆದು ಭಾವುಕನಾಗುತ್ತಿದ್ದ ಕೃಷ್ಣಕಾಂತ್‌ನಿಗೂ ಮಾಧವನಿಗೂ ಬಹಳ ತದ್ವಿರುದ್ಧ ಸ್ವಭಾವವಿತ್ತು.

ನಾನು ಮಾಧವನ ಮೋಹಕ ರೂಪಕ್ಕೆ ಆಕರ್ಷಿತಳಾಗಿ ಆತನ ಸ್ವಭಾವವನ್ನು ನಿಶ್ಚಿತವಾಗಿ ಕಂಡುಕೊಳ್ಳಲು ಸಾಧ್ಯವಾಗಿರಲಿಲ್ಲ. ಆತ ಸ್ವಭಾವತಃ ಸ್ವಾರ್ಥಿ ಮತ್ತು ಅತಿಯಾದ ಆತ್ಮರತಿ ಇದ್ದವನು. ನಾನು ಹೊಗಳುತ್ತಲೇ ಇರಬೇಕು, ಆಗ ಮಾತ್ರ ಆತ ಒಲಿಯುವುದಾಗಿತ್ತು. ನಾನು ಹೊಗಳದ ಹೊರತು ಆತ ಮುನಿಯುತ್ತಿದ್ದ. ನನ್ನನ್ನು ಶಂಕಿಸುತ್ತಿದ್ದ.

ನನಗೆ ವಯಸ್ಸೇನೂ ಮೀರಿ ಹೋಗಿರಲಿಲ್ಲ. ಆದರೂ ದಿನಗಳು ಕಳೆದಂತೆ ನಾನು ಸಮಾಜವನ್ನು ಹೆಚ್ಚೇ ಕಾಣತೊಡಗಿದೆ. ಆ ಸಮಾಜ ಕುಟುಂಬದಿಂದ ಆಗಿತ್ತು. ಕುಟುಂಬವನ್ನೇ ಇಷ್ಟಪಡುತ್ತಿತ್ತು.

ನಾನು ಒಂದು ಹುಂಬುತನದಲಿ ಕುಟುಂಬದ ರೂಢಿಯಿಂದ ಹೊರಗುಳಿದಿದ್ದೆ. ಮಾಧವ ನನ್ನೊಡನಿದ್ದೂ ಕುಟುಂಬ ಹೊಂದಿದ್ದ. ನಾನು ಹೊರಗುಳಿದಿದ್ದ ಕುಟುಂಬ.

ಆತನ ತಂಗಿಯ ಮದುವೆಗೆ, ತಮ್ಮನ ಮದುವೆಗೆ ನನ್ನ ಕಾರಣಕ್ಕೆವತೊಂದರೆಯಾಗುತ್ತಿದೆಯೆಂದು ತಗಾದೆ ತೆಗೆದ.

'ಅವರಿಗೂ ಲೀವ್ಇನ್ ಇರಲು ಹೇಳು'.

ಇದೊಂದೇ ಮಾತು ನಾನು ಹೇಳಿದ್ದು, ತಕ್ಷಣವೇ ಕಣ್ಣು ಕತ್ತಲಾಗುವಂತೆ ಕೆನ್ನೆಗೆ ಅಪ್ಪಳಿಸಿತ್ತು ಮಾಧವನ ಕೈ...

ನಾನು ಆಮೇಲೆ ಕಾನೂನಿನ ಮೊರೆ ಹೋಗಲು ಬಯಸಲಿಲ್ಲ.

ಕೃಷ್ಣಕಾಂತನ ರಾಧೆಯಾಗಲು ಡಲ್ಲಾಸ್ ವಿಮಾನದ ಟಿಕೇಟ್ ಕಾಯ್ದಿರಿಸಿದೆ... ಆಗಲೇ ಹೇಳಿದಂತೆ, ಕೃಷ್ಣಕಾಂತನು ನನಗಾಗಿ ಕಾಯುತ್ತಿರುವ ಹುಚ್ಚುಪ್ರೇಮಿ ಆಗಿಯೇ ಉಳಿದಿರುವುದು ಕತೆ ಸುಖಾಂತ್ಯ ಪಡೆಯಲು ಕಾರಣವಾಯ್ತು. ಮಾಧವನಿಂದ ನಾನು ಮುಕ್ತಿ ಪಡೆಯಲೂ.

ಪ್ರತಿಕ್ರಿಯಿಸಿ: **feedback@sudha.co.in**